4. ಶಾಸನ ರಚನೆ

I. ವಿಧೇಯಕವನ್ನು ಮಂಡಿಸುವುದು

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2015.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು) (ಕೃಷಿ ರಾಜ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2015 ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2015 ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಮಂತ್ರಿಗಳು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):– ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕ ಮಂಡಿಸಲಾಗಿದೆ.

(ಅನುಬಂಧ–1)

ಅಧ್ಯಕ್ಷರು:– ಮಾನ್ಯ ಕಾನೂನು ಸಚಿವರೆ, ನಾನು ಈಗಾಗಲೇ ಹೇಳಿದ್ದೇನೆ. ನನಗೆ ಈ ವರ್ಗಾವಣೆ ಬಗ್ಗೆ ಕಾಡುತ್ತಿರುವುದೇನೆಂದರೆ, ಒಂದೊಂದು ಇಲಾಖೆಗೆ ಒಂದೊಂದು ವರ್ಗಾವಣೆಯ ಕಾನೂನನ್ನು ನೀವು ತಂದರೆ ಎಲ್ಲಾ ಇಲಾಖೆಗಳಿಗೂ ತರಬೇಕಾಗುತ್ತದಲ್ಲವೇ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಇದಕ್ಕಾಗಿ comprehensive ಆಗಿ ಒಂದು legislation ತರುವುದಕ್ಕೆ ಅವಕಾಶವಿದೆ. ಆದರೆ ಒಂದೊಂದು ಇಲಾಖೆಯವರು ಬೇರೆ ಬೇರೆ ರೀತಿಯಲ್ಲಿ ತಮ್ಮದೇ ಆದ ನೀತಿಗಳನ್ನು ಇಟ್ಟುಕೊಂಡಿರುತ್ತಾರೆ. ಅದನ್ನೆಲ್ಲಾ comprehensive ಆಗಿ ತರುವುದಕ್ಕೆ ಕಷ್ಟವಾಗುತ್ತೇನೋ ಎನ್ನುವ ಕಾರಣಕ್ಕೋಸ್ಕರ ಬಿಟ್ಟಿದ್ದೇವೆ. ಈಗ ಕೆಲವು ಇಲಾಖೆಯಲ್ಲಿ ಮಾತ್ರ ಇದೆ. ಈಗ Health ನಲ್ಲಿದೆ, Education ನಲ್ಲಿದೆ, ಈಗ Agriculture ನಲ್ಲಿ ಬರುತ್ತಿದೆ.

ಅಧ್ಯಕ್ಷರು:– ಇದೇ ತರಹ ಎಲ್ಲಾ ಇಲಾಖೆಗಳಲ್ಲಿಯೂ ಕಾನೂನು ತರುತ್ತೀರ?

ಶ್ರೀ ಟಿ.ಬಿ. ಜಯಚಂದ್ರ:– Comprehensive ಆಗಿ legislation ತರುವುದಕ್ಕೆ ಅವಕಾಶವಿದೆ.

ಅಧ್ಯಕ್ಷರು:– ಅದು ಬೇರೆ ಮಾತು. ಈಗ ನೀವು ಒಂದು ಹೆಜ್ಜೆ ಮುಂದಿಟ್ಟಿದ್ದೀರಿ. ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ವರ್ಗಾವಣೆಗೆ ಒಂದು ಕಾನೂನು ತರುವುದಕ್ಕೆ ಹೊರಟಿದ್ದೀರಿ. ಇದೇ ರೀತಿ ಎಲ್ಲಾ ಇಲಾಖೆಗೂ ಇದೇ ರೀತಿಯಾದಂಥ ಕಾನೂನನ್ನು ತರುತ್ತೀರೋ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, it is a policy decision. ಇದರ ಬಗ್ಗೆ ಸಚಿವ ಸಂಪುಟದಲ್ಲಿ ಕುಳಿತು ಚರ್ಚೆ ಮಾಡಬೇಕಾಗುತ್ತದೆ. ಚರ್ಚೆ ಮಾಡಿ ಅದನ್ನು ತರಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಚಿವರೆ, ಈಗ ಸಾರಿಗೆ ಇಲಾಖೆ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ ಹಲವಾರು ನಿಗಮಗಳಿವೆ. ಅಲ್ಲಿರುವವರು ಇಲ್ಲಿ ಬರುವುದಿಲ್ಲ, ಇಲ್ಲಿಂದ ಅಲ್ಲಿಗೆ ಹೋಗುವವರಿಲ್ಲ. ಇದಕ್ಕೇನಾದರೂ ವರ್ಗಾವಣೆ ನೀತಿಯ ವಿಧೇಯಕವನ್ನು ತೆಗೆದುಕೊಂಡು ಬರುತ್ತೀರೇನು?

ಶ್ರೀ ಟಿ.ಬಿ. ಜಯಚಂದ್ರ:– ನೀವು ಚರ್ಚೆ ಮಾಡಿ ಸಲಹೆಗಳನ್ನು ಕೊಡಿ. ಆದರೆ Comprehensive ಆಗಿ ಒಂದು ಕಾನೂನು ತರುವುದಕ್ಕೆ ಬಾಧಕವಿಲ್ಲ. ಆದರೆ individual ಆಗಿ problem ಆಗುತ್ತದೆ ಎನ್ನುವುದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ಕೃಷಿ ಇಲಾಖೆಯಲ್ಲಿ ನೌಕರರುಗಳೇ ಇಲ್ಲ. ಹೀಗಿರುವಾಗ ನೀವು ಯಾರನ್ನು ವರ್ಗಾವಣೆ ಮಾಡುತ್ತೀರಿ? 80% ಹುದ್ದೆಗಳು ಖಾಲಿಯಿವೆ. ಹೀಗೆ 80 ಪರ್ಸೆಂಟೋ ಅಥವಾ 90 ಪರ್ಸೆಂಟೋ ಹುದ್ದೆಗಳು ಖಾಲಿಯಿರುವಾಗ ನೀವು ಯಾರನ್ನು ವರ್ಗಾವಣೆ ಮಾಡುತ್ತೀರಿ?

ಶ್ರೀ ಸಿ.ಟಿ. ರವಿ:– ಕಡ್ಡಾಯ ನೇಮಕದ ಪಾಲಿಸಿ ತಂದು ಆಮೇಲೆ ವರ್ಗಾವಣೆ ಮಾಡಿ.

ಅಧ್ಯಕ್ಷರು:– ಈಗ ಸಾಕು. ಮಾನ್ಯ ಕಾನೂನು ಸಚಿವರೆ ಲೋಕಾಯುಕ್ತ ವಿಧೇಯಕದ ಪರ್ಯಾಲೋಚನಾ ಪ್ರಸ್ತಾವ ಮಂಡಿಸಿ.